ಓ ಎಸ್ ನಂ.**132/15**
PW-3

ಸಾಕ್ಷಿಯನ್ನು ಇಂದು ದಿನಾಂಕ 12/09/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಶ್ರೀಮತಿ. ಎಸ್.ಆರ್.ಜಿ ವಕೀಲರಿಂದ

ನಾನು 2 ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದಿರುತ್ತೇನೆ. ನನಗೆ ದಿಕ್ಕುಗಳು ಗೊತ್ತಾಗುತ್ತವೆ. ನಾನು ಇವತ್ತು ನಂದಿಹಾಳ ಹಳ್ಳದ ಬಗ್ಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ವಾದಿಯ ಜಮೀನ ಪಕ್ಕದಲ್ಲಿ ಹರಿಯವು ಹಳ್ಳ ನಂದಿಹಾಳ ಹಳ್ಳ. ಸದರಿ ಹಳ್ಳವು ದೊಡ್ಡಕೇರಿಯಿಂದ ಇಂಗಳೇಶ್ವರಕ್ಕೆ ಬರುತ್ತದೆ ಎಂದರೆ ಸರಿ. ಇಂಗಳೇಶ್ವವರದಲ್ಲಿ ಸದರಿ ಹಳ್ಳ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ವಾದಿಯ ಜಮೀನು ಸರ್ವೆ ನಂ. 1282 ಕ್ಷೇತ್ರ 14 ಎಕರೆ ಮೇಲೆ ಗುಂಟೆ ಇರುತ್ತದೆ. ಪ್ರತಿವಾದಿಯರ ಜಮೀನು ಸರ್ವೆ ನಂ. 1302 ಕ್ಷೇತ್ರ 9 ಎಕರೆ ಇರುತ್ತದೆ. ಸದರಿ ಪ್ರತಿವಾದಿಯರ ಜಮೀನದಲ್ಲಿ 3 ಪಟ್ಟಿಗಳಾಗಿರುತ್ತವೆ. ಪ್ರತಿವಾದಿಯರ ಪಟ್ಟಿಯ ಕ್ಷೇತ್ರ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಜಮೀನು ಉತ್ತರಕ್ಕೆಃ ಕಾಶೀನಾಥ ಹಳ್ಳಿಯರ ಜಮೀನು ಇದೆ. ಪ್ರತಿವಾದಿಯರ ಜಮೀನ ದಕ್ಷಿಣಕ್ಕೆಃ ಶರಣಪ್ಪ ಜುಮನಾಳರವರ ಜಮೀನು ಇದೆ. ಪ್ರತಿವಾದಿಯ ಜಮೀನಿನಿದ ಉತ್ತರಕ್ಕೆಃ ಹಳ್ಳಿಯರ ಜಮೀನದಲ್ಲಿ ಹಳ್ಳದ ದಾರಿ ಬದಲಾವಣೆ ಆಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಬದಲಾವಣೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಹಳ್ಳಿಯವರ ಜಮೀನದಲ್ಲಿ ಹರಿದ ಹಳ್ಳದ ಕುರಿತು ಹಳ್ಳಿಯರು ಪ್ರತಿವಾದಿಯವರಿಗೆ ಏನು ತಕರಾರು ಮಾಡಿರುವುದಿಲ್ಲ. ಸಾಮಾನ್ಯವಾಗಿ ಪ್ರಕೃತಿ ನಿಯಮ ಪ್ರಕಾರ ಹಳ್ಳ ಒತ್ತಿ ಹರಿದಾಗ ಸ್ವಲ್ಪ ದಿಕ್ಕನ್ನು ಬದಲಾಯಿಸುತ್ತದೆ ಎಂದರೆ ಸರಿ. ಈ ರೀತಿ ಬದಲಾವಣೆಗೆ ಮನುಷ್ಯನು ಜವಬ್ದಾರಿಯಲ್ಲ ಎಂದರೆ ಸರಿ. ಸದರಿ ಹಳ್ಳವು ಪ್ರತಿವಾದಿಯರ ಜಮೀನದಲ್ಲಿ ಇರುತ್ತದೆ. ಸದರಿ ಹಳ್ಳ ಹಾಗೂ ವಾದಿಯ ಜಮೀನದ ನಡುವೆ ಪ್ರತಿವಾದಿಯರ ಅರ್ಧ ಜಮೀನು ಉಳಿಯುತ್ತದೆ ಎಂದರೆ ಸರಿ. ವಾದಿಯ ಜಮೀನದ ಪೂರ್ವಕ್ಕೆ ಒಂದು ದೊಡ್ಡ ಓಡ್ಡು ಇರುತ್ತದೆ ಎಂದರೆ ಸರಿ. ಸದರಿ ಹಳ್ಳ ಎಷ್ಟು ಕ್ಷೇತ್ರ ಸರಿದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಹಳ್ಳ ಸರಿದು ಸುಮಾರು 8 ವರ್ಷಗಳು ಆಗಿರುತ್ತವೆ.

ದಾವಾ ಹಳ್ಳ ದೊಡ್ಡ ಪ್ರಮಾಣದಲ್ಲಿ ಇದೆ. ದೊಡ್ಡ ಪ್ರಮಾಣ ಹಳ್ಳ ಮನುಷ್ಯನ ಕೈಯಿಂದ ಸರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಓಡ್ಡನು ಹಾಕಿ ಸರಿಸಬಹುದು ಎಂದು ನುಡಿಯುತ್ತಾರೆ. ಸರಿದ ಹಳ್ಳದ ಎಡಕ್ಕೆ ಹಾಗೂ ಬಲಕ್ಕೆ ಯಾವುದು ಓಡ್ಡು ಇಲ್ಲ ಎಂದರೆ ಸರಿ. ನಮ್ಮ ಮನೆತನದ ಆಸ್ತಿಗಳು ಪ್ರತಿವಾದಿಯ ಜಮೀನ ಸನಿಹ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರ ಜಮೀನ ಪೂರ್ವಕ್ಕೆ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ನನ್ನ ಜಮೀನು ಸರ್ವೆ ನಂ. 94/1 ಇರುತ್ತದೆ. ಸದರಿ ಸರ್ವೆ ನಂ.94/1 ನನ್ನ ಹೆಸರಿನಲ್ಲಿ ಇರುವುದಿಲ್ಲ. ನಾನು ಸದರಿ ಆಸ್ತಿಯನ್ನು ಸುಮಾರು 2 ವರ್ಷಗಳ ಹಿಂದೆ ನಮ್ಮ ತಮ್ಮನಿಗೆ ಮಾರಿರುತ್ತೇನೆ. ಸದರಿ ಆಸ್ತಿಯು 2 ವರ್ಷ ಗಳ ಹಿಂದೆ ನನ್ನ ಹೆಸರಿನಲ್ಲಿ ಇತ್ತು ಎಂಬುದಕ್ಕೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಜಮೀನು ವಾದಿ ಹಾಗೂ ಪ್ರತಿವಾದಿಯರ ಜಮೀನಿನ ಹತ್ತಿರ ಇದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರಿದ ಹಳ್ಳದ ಕುರಿತು ನ್ಯಾಯ ಪಂಚಾಯತಿ ಆಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾನು ಕೇಳಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವಾಗಿ ಪ್ರತಿವಾದಿಯರ ಹಾಗೂ ನನ್ನ ನಡುವೆ ಯಾವುದೇ ಮಾತುಕತೆಯಾಗಿರುವುದಿಲ್ಲ. ಸದರಿ ದಾವಾ ಹಳ್ಳದ ಕುರಿತು ನನಗೆ ಯಾವುದೇ ಮಾಹಿತಿ ಇರದಿದ್ದರೂ ವಾದಿಯೂ ನನಗೆ ಬೇಕಾದವರು ಆಗಿರುವುದರಿಂದ ಅವರ ಪರ ಸುಳ್ಳು ಸಾಕ್ಷಿಯನ್ನು ನುಡಿಯುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಹಳ್ಳದ ಹರಿವನ್ನು ಬದಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಬಸವನ ಬಾಗೇವಾಡಿ.